12.1.93ರಲ್ಲಿ ದರ ಗುತ್ತಿಗೆ ನಿಗದಿ ಪಡಿಸಿ ಆದೇಶ ಹೊರಡಿಸಲಾಗಿದೆ. ಈ ದರ ಗುತ್ತಿಗೆಯ ಆದೇಶಗಳನ್ನು ಎಲ್ಲಾ ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಖರೀದಿ ಮಾಡಲು ಕಳುಹಿಸಿ ಮಾರ್ಚ್ 31ರೊಳಗಾಗಿ ಖರೀದಿಸಲು ನಿರ್ದೇಶನಾಲಯದಿಂದ ತಿಳಿಸಲಾಗಿದೆ. ಆದಾಗ್ಯೂ ದರ ಗುತ್ತಿಗೆ 'ಯುನಾನಿ' ಔಷಧಿಗಳನ್ನು ಕೂಡಲೇ ಖರೀದಿಸಲು ಇನ್ನೊಮ್ಮೆ ಆದೇಶ ನೀಡಲಾಗುವುದು.

2) <u>ಬೆಳ್ತಂಗಡಿ ತಾಲ್ಲೂಕಿನಲ್ಲಿ ಅರಣ್ಯ ಭೂಮಿ ಮಂಜೂರಾತಿ ಸಮಿತಿಯ ರಚನೆ.</u>

ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಅರಣ್ಯ ಭೂಮಿಯಲ್ಲಿ ನೂರಾರು ಕುಟುಂಬಗಳು ಕೃಷಿ ಮಾಡಿಕೊಂಡು ಹಲವಾರು ವರ್ಷಗಳಿಂದ ನೆಲೆಸಿದ್ದಾರೆ. ಸರ್ಕಾರ ಎರಡು ಹೆಕ್ಟೇರು ಭೂಮಿಯನ್ನು ಒತ್ತುವರಿ ಮಾಡಿದ ರೈತನಿಗೆ ಕೊಡುತ್ತಿರುವ ಈ ಸಂದರ್ಭದಲ್ಲಿ ಅರಣ್ಯದಲ್ಲಿ ಕೃಷಿ ಮಾಡಿ ನೆಲೆಸಿದವನಿಗೆ ಭೂಮಿ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲ. ನೆರಿಯ, ಪುದುಬೆಟ್ಟು, ಕಳಿಂಜ, ರೆಖ್ಯ, ಶಿಶಿಲ, ಶಿಬಾಜೆ ಗ್ರಾಮಗಳಲ್ಲಿ ಫಾರೆಸ್ಟ್ ಪರಂಬೂಕು ಜಮೀನು ಕೃಷಿಕರು ಆಕ್ರಮಣ ಮಾಡಿ ವ್ಯವಸಾಯ ಮಾಡುತ್ತಿದ್ದಾರೆ. ಈ ಜಮೀನು ಪ್ರಸ್ತುತ ರೆವಿನ್ಯೂ ಕಾನೂನಿನಂತೆ ಮಂಜೂರು ಮಾಡಲು ಆಗುತ್ತಿಲ್ಲ. ಆದ್ದರಿಂದ ಫಾರೆಸ್ಟ್ ಭೂಮಿ ಮಂಜೂರಾತಿ ಸಮಿತಿಯನ್ನು ಆದಷ್ಟು ಶೀಘ್ರ ರಚಿಸಿ ಆಕ್ರಮಣ ಮಾಡಿದ ಅರಣ್ಯ ಭೂಮಿಯನ್ನು ಬಡ ಒತ್ತುವರಿದಾರರಿಗೆ ಮಂಜೂರು ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಪಿ. ಕೇಶವಮೂರ್ತಿ(ಅರಣ್ಯ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅರಣ್ಯ ಪ್ರದೇಶದ ಅಕ್ರಮ ಸಾಗುವಳಿಯ ಪ್ರದೇಶವು ಈ ಕೆಳಕಂಡಂತಿದೆ :

1978 ರ ಪೂರ್ವದ ಅಕ್ರಮ ಸಾಗುವಳಿ	29,266 ಪ್ರಕರಣಗಳು	37,422.19 ಹೆಕ್ಟೇರ್‌ಗಳಲ್ಲಿ
1978 ರ ನಂತರ ಅಕ್ರಮ ಸಾಗುವಳಿ	9,542 ಪ್ರಕರಣಗಳು	5, 823.39 ಹೆಕ್ಟೇರ್‌ಗಳಲ್ಲಿ

ದಿನಾಂಕ 27-4-78 ರ ಪೂರ್ವದ ಅರಣ್ಯ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ಉದ್ದೇಶದಿಂದ ಸರ್ಕಾರವು ಈಗಾಗಲೇ ದಿನಾಂಕ : 10-10-91ರ ಆದೇಶ ಸಂಖ್ಯೆ ಎ.ಹೆಚ್.ಎಫ್.ಎಫ್. 5 ಎಫ್.ಜಿ.ಎಲ್, (ವಾಲ್ಯೂ೦-2)ರಲ್ಲಿ ಇಂತಹ ಅತಿಕ್ರಮಣ ಪ್ರಕರಣಗಳನ್ನು ಸಲ್ಲಿಸಲು ಸಕ್ರಮಗೊಳಿಸಲು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಗಳನ್ನು ಆದೇಶಿಸಿದೆ. ಅರಣ್ಯ ಸಂರಕ್ಷಣೆ ಕಾಯ್ದೆ 1980 ರಂತೆ, ದಿನಾಂಕ : 27-4-78 ರ ಪೂರ್ವದಲ್ಲಿ ಆದ ಅತಿಕ್ರಮಣಗಳನ್ನು ಸಹ ಕ್ರಮಬದ್ಧಗೊಳಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಒಪ್ಪಿಸಬೇಕಾಗುತ್ತದೆ. ಸದರಿ ಸರ್ಕಾರಿ ಆದೇಶ ಮತ್ತು ಅರಣ್ಯ ಸಂರಕ್ಷಣಾ ಕಾಯ್ದೆ 1980 ರಂತೆ, ಭಾರತ ಸರ್ಕಾರದ ಅನುಮತಿ ಪಡೆಯಲು ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಸ್ತಾವನೆಗಳೊಂದಿಗೆ ಕಡತಗಳನ್ನು

ತಯಾರಿಸಲು ಕ್ರಮ ಕೈಗೊಂಡಿದ್ದು ಇಷ್ಟರಲ್ಲಿಯೇ ಅವುಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲಿದ್ದಾರೆ. ಅರಣ್ಯ ಸಂರಕ್ಷಣಾ ಕಾಯ್ದೆ 1980ರನ್ವಯ ಕಡತಗಳನ್ನು ತಯಾರಿಸುವಲ್ಲಿ ಅಕ್ರಮ ಪ್ರದೇಶದ ಮೋಜಿಣಿ ಕಾರ್ಯ ನಡೆಯಬೇಕಾಗಿರುವುದರಿಂದಲೂ ಮತ್ತು ಮೇಲ್ಕಂಡ ಆದೇಶದ ರೀತ್ಯಾ 3 ಎಕರೆ ಅಥವಾ ಕಮ್ಮಿ ಇರುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಭೂರಹಿತ ಸಣ್ಣ ವ್ಯವಸಾಯ ಕೂಲಿಕಾರರು ಹಾಗೂ ಸಾಕಷ್ಟು ಭೂಮಿ ಇಲ್ಲದವರನ್ನು ಗುರುತಿಸಬೇಕಾಗಿರುವುದರಿಂದ ಈ ಪ್ರಕರಣಗಳು ತಡವಾಗುತ್ತಿವೆ.

ಇಂತಹ ಅತಿಕ್ರಮಣಗಳಲ್ಲಿ, ದಿನಾಂಕ : 27-4-78 ರ ಪೂರ್ವದಿಂದಲೂ ಆಗಿದೆಯೇ ಅಥವಾ ಇಲ್ಲವೆ ಎಂಬ ಅನುಮಾನಾಸ್ಪದ ಪ್ರಕರಣಗಳು ಕಂಡು ಬಂದಲ್ಲಿ, ಅಂತಹ ಪ್ರಕರಣಗಳನ್ನು ದಿನಾಂಕ : 9-11-92 ರ ಸರ್ಕಾರಿ ಆದೇಶ ಸಂಖ್ಯೆ : ಎ.ಹೆಚ್.ಎಫ್.ಎಫ್. 5 ಎಫ್.ಜಿ.ಎಲ್, 90 (ವಾಲ್ಯೂಂ-2) ರಂತೆ ರಚಿಸಲಾದ ತಾಲ್ಲೂಕು ಮಟ್ಟದ ಸಮಿತಿಗಳಿಗೆ ವಹಿಸಲಾಗುವುದು. ಸದರಿ ಸಮಿತಿಯಲ್ಲಿ ಈ ಕೆಳಕಂಡಂತೆ ಸದಸ್ಯರಿರುತ್ತಾರೆ.

1. ಉಪ ಅರಣ್ಯ ಸಂರಕ್ಷಣಾಧಿಕಾರಿ : ಅಧ್ಯಕ್ಷರು
2. ಸ್ಥಳೀಯ ಶಾಸಕರು ಅಥವಾ ಅವರ ನಾಮ ನಿರ್ದೇಶಿತ ವ್ಯಕ್ತಿ : ಸದಸ್ಯರು
3. ಅಧಿಕಾರೇತರರು : ಸದಸ್ಯರು
4. ತಾಲ್ಲೂಕು ತಹಶೀಲ್ದಾರರು : ಸದಸ್ಯರು
5. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು : ಸದಸ್ಯರು ಮತ್ತು ಸಂಚಾಲಕರು.

ತಾಲ್ಲೂಕು ಮಟ್ಟದ ಸಮಿತಿಗಳಿಗೆ ನೇಮಕಾತಿ ಮಾಡಬಹುದಾದ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಅಧಿಕಾರೇತರ ಸದಸ್ಯರ ಹೆಸರನ್ನು ನಮೂದಿಸಿ ಬೇರೆಯೇ ಆದೇಶ ಹೊರಡಿಸಲು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಅತಿಕ್ರಮಣದ ಬಗ್ಗೆ ಬರುವ ಅನುಮಾನಾಸ್ಪದ ಪ್ರಕರಣಗಳ ಬಗ್ಗೆ ಕೈಗೊಳ್ಳುವ ಕಾರ್ಯ ಮತ್ತು ಅವುಗಳ ಇತ್ಯರ್ಥಗಳ ಬಗ್ಗೆಯೂ ಸಹಾ ಮಾರ್ಗ ಸೂಚನೆಗಳನ್ನು ಹೊರಡಿಸಿದ್ದು, ಅಂತಹ ಪ್ರಕರಣಗಳಲ್ಲಿ ಸಮಿತಿಯ ಶಿಫಾರಸ್ಸೇ, ಅಂತಿಮವಾಗಿರುತ್ತದೆ. ದಿನಾಂಕ : 27-4-1978ರ ನಂತರ ಅತಿಕ್ರಮಣ ಮಾಡಿದವರನ್ನು ಮತ್ತು 3 ಎಕರೆಗಿಂತ (1.2 ಹೆ) ಮೇಲ್ಪಟ್ಟು ಅಕ್ರಮ ಸಾಗುವಳಿ ಮಾಡುತ್ತಿರುವರನ್ನು ಹಾಗೂ 3 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರನ್ನು ಸರ್ಕಾರಿ ಆದೇಶ ಸಂಖ್ಯೆ ಎ.ಹೆಚ್.ಎಫ್.ಎಫ್. 5 ಎಫ್.ಜಿ.ಎಲ್, 90 (ವಾಲ್ಯೂಂ-2) ದಿನಾಂಕ : 10-10-91ರ ಅನ್ವಯ, ಮತ್ತು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 64 (ಎ)ರ ರೀತ್ಯಾ ಅಕ್ರಮ ಸಾಗುವಳಿ ಪ್ರದೇಶದಿಂದ ತೆರವು ಮಾಡಿಸಬೇಕಾಗುತ್ತದೆ.

3) <u>ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಮುಧೋಳ ಗೋಪನದಲ್ಲಿ ಗ್ರಾಮದ ಬಡಜನರಿಗೆ ಚರ್ಮೋದ್ಯೋಗಕ್ಕಾಗಿ ಸಾಲದ ಮಂಜೂರಾತಿ.</u>

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅಧ್ಯಕ್ಷರೇ, ಖಾದಿ ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು ಇವರು ಪತ್ರ ಸಂಖ್ಯೆ ಡಿಒ : ನಂ ಕಬಿ : ಡಿಒ 6 : 2 : ಲೆದರ್ : 344-92-93 ದಿನಾಂಕ 3.10.92ರಂದು ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಮುಧೋಳ-ಗೋಪನಪಲ್ಲಿ ಗ್ರಾಮದ ಬಡ ಹರಿಜನರಿಗೆ ಚರ್ಮೋದ್ಯೋಗಕ್ಕಾಗಿ ಮಂಜೂರಾಗಿರುವ ಸಾಲವನ್ನು ಲಿಡ್ಕರ್ ಸಂಘ ಕಳಪೆ ದರ್ಜೆಯ ಸಾಮಗ್ರಿಗಳನ್ನು ಸರಬರಾಜು ಮಾಡುತ್ತದೆಂದು ಆಕ್ಷೇಪಣೆ ಮಾಡಿದ್ದರಿಂದ ಬೇರೆ ಕಡೆಯಿಂದ ಸಾಲದ ಸಾಮಗ್ರಿ ಹಾಗೂ